ಮೈಸೂರ ಗೆಜೆಟ್

ಸರ್ಕಾರದಿಂದ ಘಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಜನವರಿ ತಾ|| 10, ಸ್ಯೆ 1885.

ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

2ನೇ ಭಾಗ.

ಇಂಡ್ಯೆಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ರೀರುವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಿನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್ನಲ್ಲಿ ಬಡ್ಡಿ ಸಲ್ಲತಕ್ಕ ಬಗ್ಯೆ ಷರಾ ಬರೆಯಲ್ಪಡಬಹುದಾದಂತಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋ ಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಷರಾ ಬಗ್ಯೆ ಇದರದಿ ರುಜು ಮಾಡಿರುವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್ಟ್‌ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗೆಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಬ್ರಿಟಿಷ್ ತಾಂಬ್ರದ ನಾಣ್ಯವನ್ನು ಕುರಿತು.

ಸರಕ್ಯೂಲರ್ ನಂಬರ್ 1611, ತಾರೀಖು 6ನೇ ಜನವರೀ 1885.

ಖಜಾನೇಗಳಲ್ಲಿ ಬ್ರಿಟಿಷ್ ತಾಂಬ್ರದ ನಾಣ್ಯಗಳು ಮತ್ತು ಚಿಲ್ಲರೇ ಬೆಳ್ಳೀ ನಾಣ್ಯಗಳು ವಿಶೇಷವಾಗಿ ಯಿಲ್ಲದೆ ಯಿರುವದ್ದರಿಂದ, ರೆವಿನ್ಯೂ ಖಿಸ್ತು ಮತ್ತು ಆಬಕಾರಿ ಬಾಕಿಗೋಸ್ಕರ ಪಾವತಿ ಮಾಡಲ್ಪಡುವ ಅಂಶಾ ತವಾ ನಾಣ್ಯಗಳನ್ನೂ ಬಿಕ್ ತಕರಾರು ತೆಗೆದುಕೊಳ್ಳತಕ್ಕದ್ದೆಂದು ತಾಲ್ಲೂಕು ಟ್ರೆಜರಿ ಆಫೀಸರುಗಳು ಕೇಳಿ ಕೊಳ್ಳಲ್ಪಟ್ಟಿರುತ್ತಾರೆ.

ಖೋಟಾ ಬೆಳ್ಳೀ ನಾಣ್ಯಗಳನ್ನು ಕುರಿತು.

ಸರಕ್ಯ್ಯುಲರ್ ನಂಬರ್ 1612, ತಾರೀಖು 6ನೇ ಜನವರೀ 1885.

ಜಾರೀಲಿರುವ ಹುಕ್ಕುಂ ಅನುಸರಿಸಿ, ಕತ್ತರಿಸಲ್ಪಟ್ಟ ಯಾ ಬಿಡಿಯಲ್ಪಟ್ಟ ಖೋಟಾ ಬೆಳ್ಳೀ ನಾಣ್ಯಗಳ ಬಾಬತು ಗತ ಡಿಸಂಬರ್ 31ನೆ ಮರಕೂಮಿಗೆ ಆಪೈರಾದ 12 ತಿಂಗಳ ಲೆಕ್ಕಗಳನ್ನು ಮಾಹೆ ಮಜಕೂರ್ 15ನೇ ಮಕ್ತುಂ ಒಳಗಾಗಿ ಮಾಮೂಲ್ ನಮೂನೆಯಲ್ಲಿ ಈ ಆಫೀಸಿಗೆ ರವಾನಿಸತಕ್ಕದ್ದೆಂದು ಡಿಸ್ಟ್ರಿಕ್ಟ್ಸ ಮತ್ತು ತಾಲ್ಲೂಕು ಟ್ರೆಜರೀ ಆಫೀಸರುಗಳು ಯಜ್ಞಾಪಿಸಲ್ಪಟ್ಟಿರುತ್ತಾರೆ.

ತಾಲ್ಲೂಕು ಲೆಕ್ಕಗಳು ಯಿದುವರಿಗಿನಂತೆಯೇ ಆಯಾ ಡಿಸ್ಟ್ರಿಕ್ಟ್ ಖಜಾನೇ ಲೆಕ್ಕಗಳಲ್ಲಿ ಅದಗಿ ಇರತಕ್ಕವು.

ಜೆ. ಹಡ್ಸನ್,
ಕಾಂಪ್ಟ್ರೋಲರ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿ॥ ಸಬ್‌ಜಡ್ಜ್‌ರ್ಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 313.

ಮೃತಪಟ್ಟ ಹುಮಕೂರು ತಾಲ್ಲೂಕು ವೊರಡಗೆರೆ ನಂಮತು ಬೀಗೆಪಾಳ್ಯದ ತಿಂಮಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ರು ರುದ್ರಪ್ಪ, ಮೃತಪಟ್ಟ ತಿಂಮಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಬೀಗೆಪಾಳ್ಯದ ವಾಸಸ್ಥರಾಗಿ ಮೃತಪಟ್ಟ ತಿಂಮಪ್ಪನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯ್ತಿ ಸ್ವಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖ್ವಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುದ್ರಪ್ಪನ, ಅರ್ಜೀಯನ್ನು 1885ನೇ ಇಸವಿ ಜನವರೀ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಂಮಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1844ನೇ ಇಸವಿ ಡಿಸಂಬರ್ ತಿಂಗಳು 19ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ದಿವಾಳೀಯಾದ ಡಿಕ್ರೀ ದೇಣೇದಾರ ಮುದರಂಗನ ವಿಷಯದಲ್ಲಿ—

ಸ್ಯ 1884ನೇ ಇಸವಿ ದಿವಾಳಿ ಕೇಸ್ ನಂಬರು 172

ಹುಕ್ಕುಂ.

ಮೇಲ್ಕಂಡ ಮುದರಂಗನು ನಿರ್ಬಂಧದಿಂದ ಖುಲಾಸೆಯೂಗಬೇಕೆಂದು ಕೊಟ್ಟ ಅರ್ಜೀ ಅಂಕವು ಬೆಂಗಳೂರು ಸಬ್ ಜಡ್ಜ್ ಸಿ. ಕ್ರಿಸ್ ಎಸ್‌ಕ್ವಯರವರ ರೂಬರೂ ಅರ್ಜೀದಾರನಾದ ಮುದರಂಗನ್ನೂ ಮತ್ತು ಸದರೀಯವನ ಲೇಣೆದಾರ್ರಾದ ಮೇಲ್ಕಂಡ ವಾದಿಗೆ ವಾರಂಟುದಾರ ಕೃಷ್ಣರಾವಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ದರ್ಯಾಫ್ತಿ ನೋಟೀಸ್ ಜಾರಿಯೂಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—ವಕ್ಕಲಿಗರ ಗಂಗ.

ಸಿವಿಲ್ ಪ್ರೊಸೀಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ- ಫಲವನ್ನು ಸದರೀ ಮುದರಂಗನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ನಿವೇಜನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಆಸ್ತಿ ರವಾಗಿಯಾಗಲಿ ಚಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1884ನೇ ಇಸವಿ ಅಕ್ಟೋಬರ್ 3ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.